

ಡಾ.ವಿನೋದ ಛೆಬ್ಬಿ

## ಮೂಢ ನಂಬಿಕೆಗಳಿಂದ ದಾಂಪತ್ಯದ ಸಂಬಂಧಗಳು ಹೇಗೆ ಹಾಳಾಗುತ್ತವೆ?

# 39: ಪೂರ್ವಾನ್ವಯದ ಅರ್ಹತೆ

ಜಾನ್ ಗಾಟ್ಮನ್ ವಿವರಿಸಿದ ವಿನಾಶ ಸೂಚಿಯ ನಾಲ್ವರು ದೂತರ (**The four horsemen of the apocalipse**) ಪೈಕಿ ಮೊದಲ ದೂತ 'ಟೀಕೆ-ಖಂಡನೆ'ಯ ಬಗೆಗೆ ಹೋದಸಲ ತಿಳಿದುಕೊಂಡೆವು. ಇನ್ನು ಎರಡನೆಯ ದೂತನ ಬಗೆಗೆ ತಿಳಿಯೋಣ.

**ಎರಡನೇ ದೂತ: ಸ್ವರಕ್ಷಣೆ-ಸಮರ್ಥನೆ**

ಸಂಗಾತಿಗಳು ಜಗಳದಲ್ಲಿ ಪರಸ್ಪರ ಆರೋಪ ಹೊರಿಸುವುದು ನಮ್ಮೆಲ್ಲರಿಗೂ ಗೊತ್ತಿದೆ. ಆಗ ಆರೋಪಗಳನ್ನು ಎದುರಿಸುವವರು ಏನು ಮಾಡುತ್ತಾರೆ? ಸಂಗಾತಿಯ ದಾಳಿಯಿಂದ ತಪ್ಪಿಸಿಕೊಳ್ಳಲು, ಅದರಿಂದ ತಮ್ಮನ್ನು ಬಚಾಯಿಸಿಕೊಳ್ಳಲು ಹಲವು ತಂತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ. ಇದಕ್ಕೆ ಸರಳವಾದ ಉದಾಹರಣೆಯನ್ನು ತೆಗೆದುಕೊಳ್ಳಿ:

ಹೆಂಡತಿ: ನೀನು ಎಲ್ಲರೆದುರು ನನ್ನ ಮೇಲೆ ಕೋಪಿಸಿಕೊಳ್ಳುತ್ತ ಬೈಯುತ್ತೀಯಾ. ನನಗೆ ತುಂಬಾ ಬೇಸರವಾಗುತ್ತದೆ. ನನಗೆ ಬೆಲೆಯೇ ಇಲ್ಲವೆಂದು ಅನ್ನಿಸುತ್ತದೆ.

ಗಂಡ: ಆಹಾ, ನೀನೇನು ನನ್ನ ಮೇಲೆ ಕಮ್ಮಿ ಕೂಗಾಡುತ್ತೀಯಾ?

ಇಲ್ಲಿ ಹೆಂಡತಿಯ ಆಕ್ಷೇಪಣೆಗೆ ಪ್ರತಿಯಾಗಿ ಗಂಡ ಟೀಕೆ ಮಾಡುತ್ತಿದ್ದಾನೆ. ವಿತಂಡತರ್ಕದ ಗಂಡನಾದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಟೀಕೆಗೆ ಪ್ರತಿಟೀಕೆ ಮಾಡುತ್ತಾನೆ. 'ನೀನು ಬೈಸಿಕೊಳ್ಳುವ ಕೆಲಸ ಮಾಡುತ್ತೀಯಾ, ಅದಕ್ಕೇ ನಾನು ಬೈಯುವುದು!'

ಇಲ್ಲಿ ಸಂಗಾತಿಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹವಣಿಕೆ ಎದ್ದು ಕಾಣುತ್ತದೆ. ಅಷ್ಟೇ ಅಲ್ಲ, ಸ್ವರಕ್ಷಣೆ-ಸಮರ್ಥನೆಯ ಭರದಲ್ಲಿ ಸಂಗಾತಿಯಿಂದ ಬಂದಿದ್ದೆಲ್ಲ ಪ್ರಹಾರವೆಂದುಕೊಂಡು ಭ್ರಮಿಸಿ, ಅದಕ್ಕೆ ಪ್ರತಿಪ್ರಹಾರ ನೀಡುವ ತವಕವಿದೆ.

ಆತ್ಮರಕ್ಷಣೆ ಎಂದರೆ ಏನು ಅಂತ ಗೊತ್ತಾಯಿತಲ್ಲ?

ಈ ಆತ್ಮರಕ್ಷಣೆ ದಾಂಪತ್ಯದಲ್ಲಿ ಹತ್ತುಹಲವು ರೂಪ ಧರಿಸುತ್ತದೆ. ಉದಾಹರಣೆಗೆ, ಗಂಡಹೆಂಡಿರ ನಡುವೆ ನಿತ್ಯ ನಡೆಯುವ ಮಾತುಕತೆಗಳನ್ನೇ ತೆಗೆದುಕೊಳ್ಳಿ:

★ ನೀನು ನನಗೆ ಬೆಳಿಗ್ಗೆ ಎಬ್ಬಿಸಲಿಲ್ಲ, ಅದಕ್ಕೇ ನನಗೆ ವಾಕಿಂಗ್ ಹೋಗಲು ಆಗಲಿಲ್ಲ.
★ ನನಗೆ ನೆನಪು ಮಾಡಿದ್ದರೆ ನಾನು ಸಿನೆಮಾಕ್ಕೆ ಟಿಕೆಟ್ ತರುತ್ತಿದ್ದೆ.
★ ನೀನು ನನಗೆ ಔಷಧಿ ತೆಗೆದುಕೊಳ್ಳಲು ಜ್ಞಾಪಿಸುತ್ತಿಲ್ಲ. ಅದಕ್ಕೇ ನನ್ನ ಬಿಪಿ ಇತ್ತೀಚೆಗೆ ಹೆಚ್ಚಾಗಿದೆ.
★ ನಿನಗೆ ಖಾರ ಅಷ್ಟಾಗಿ ಹಿಡಿಸುವುದಿಲ್ಲವೆಂದು ನೀನು ದಿನಾಲೂ ನೆನಪು ಮಾಡದ ಹೊರತು ಅಡುಗೆಗೆ ಖಾರ ಹೆಚ್ಚಾಗಿಯೇ ಆಗುತ್ತದೆ.
★ ನಾನು ನೆರೆಯವರ ಜೊತೆಗೆ ಜಗಳ ಮಾಡುವಾಗ ಇಷ್ಟು ವಿಕೋಪಕ್ಕೆ ಹೋಗುತ್ತದೆ ಎಂದು ನಿನಗೆ ಗೊತ್ತಾದಾಗ ನನ್ನನ್ನು ಯಾಕೆ ತಡೆಯಲಿಲ್ಲ?
★ ನಾನು ಮಾಡಿದ್ದು ಬರೀ ತಮಾಷೆ ಅಷ್ಟೆ. ಅದು ನಿನಗೆ ಅವಮಾನ ಎಂದು ಹೇಳದಿದ್ದರೆ ನನಗೆ ಗೊತ್ತಾಗುವುದಾದರೂ ಹೇಗೆ?
★ ನಿನಗೆ ಸೆಕ್ಸ್ ಬೇಕು ಎಂದು ಬಾಯಿಬಿಟ್ಟು ಹೇಳಿದರೆ ತಾನೇ ನಾನು ನಿನ್ನ ಹತ್ತಿರ ಬರುವುದು?

**ಪೂರ್ವಾನ್ವಯದಿಂದ ಸಮರ್ಥನೆ:** ಇನ್ನು ಕೆಲವರು ಆತ್ಮರಕ್ಷಣೆ ಮಾಡಿಕೊಳ್ಳುವುದು ಇನ್ನೂ ವಿಚಿತ್ರವಾಗಿರುತ್ತದೆ. ಗ್ರೀನ್‌ಬರ್ಗ್ ಹಾಗೂ ಒಮ್ಯಾಲ್ಲೀ ತಮ್ಮ **How to Avoid Love and Marriage** ಎಂಬ ಪುಸ್ತಕದಲ್ಲಿ ಆತ್ಮರಕ್ಷಣೆಯ ಬಗೆಗೆ ತಮಾಷೆಯಾಗಿ ಬರೆದಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳಲು ಹೀಗೆ ಕಲ್ಪಿಸಿಕೊಳ್ಳಿ: ಹೆಂಡತಿಯು ದೀಪಾವಳಿಗೆಂದು ಎಲ್ಲರಿಗೂ ಬೆಲೆಬಾಳುವ ಬಟ್ಟೆ ತಂದಿದ್ದಾಳೆ. ಕ್ರೆಡಿಟ್ ಕಾರ್ಡ್‌ನಲ್ಲಿ ದೊಡ್ಡ ಮೊತ್ತ ಸೇರಿರುವುದರ ಬಗೆಗೆ ಗಂಡ ಆಕ್ಷೇಪಣೆ ಎತ್ತುತ್ತಾನೆ.

'ಇಷ್ಟೊಂದು ಖರ್ಚು ಮಾಡಿದ್ದೀಯಲ್ಲ, ಇದನ್ನು ಹೇಗೆ ಭರ್ತಿ ಮಾಡಲಿ? ನಮ್ಮ ಮುಂದಿನ ತಿಂಗಳ ಖರ್ಚಿಗೆ ಏನು ಉಳಿಯಿತು?' ಆಗ ಹೆಂಡತಿ, 'ಈ ಮಾತು ನನಗೆ ಮುಂಚೆಯೇ ಯಾಕೆ ಹೇಳಲಿಲ್ಲ? ನಾನು ಧಾರಾಳಿ ಎಂದು ನಿನಗೆ ಚೆನ್ನಾಗಿ ಗೊತ್ತು. ಒಂದೇ ಒಂದು ಫೋನ್ ಮಾಡಿ ಹೇಳಿದ್ದರೂ ನಾನು ಖರ್ಚು ಮಾಡುವುದನ್ನು ನಿಲ್ಲಿಸಬಹುದಾಗಿತ್ತು!' ಅಷ್ಟಕ್ಕೂ ನಿಲ್ಲದೆ ಹೇಳುತ್ತಾಳೆ: 'ನಿಮಗೆ ಮನೆಯ ಖರ್ಚನ್ನು ಸರಿದೂಗಿಸಲು ಸಂಪಾದನೆ ಮಾಡುವ ಯೋಗ್ಯತೆ ಯಾವಾಗ ಬರುತ್ತದೋ ಕಾಣೆ!' ಅಂದರೆ, ಗಂಡ ತನ್ನ ದುಂದುವೆಚ್ಚದ ಸ್ವಭಾವವನ್ನು ಅರಿತೂ ತಡೆಗಟ್ಟದಿರುವುದು ಅವನದೇ ತಪ್ಪು! ತನ್ನ ಪ್ರಮಾದಕ್ಕಾಗಿ ಸಂಗಾತಿಯ ಮೇಲೆ ಗೂಬೆ ಕೂಡಿಸುವ ಪ್ರಯತ್ನ ಇಲ್ಲಿ ನಡೆದಿದೆ. ಇದಕ್ಕೆ ಹಿನ್ನೋಟದಿಂದ ಸಮರ್ಥಿಸಿಕೊಳ್ಳುವುದು ಎನ್ನಬಹುದು – ಸರ್ಕಾರಿ ಭಾಷೆಯಲ್ಲಿ ಪೂರ್ವಾನ್ವಯದ ಅರ್ಹತೆ ಎನ್ನುತ್ತಾರಲ್ಲ, ಹಾಗೆ. (ಇದನ್ನು ಅರ್ಥಮಾಡಿಕೊಳ್ಳಲು ಸರ್ಕಾರಿ ನೌಕರರಿಗೆ ಸಂಬಳ ಹೆಚ್ಚಿಸುವ, ಮತ್ತು ಬಡ್ತಿ ಕೊಡುವುದರ ಬಗೆಗಿನ ಸುತ್ತೋಲೆಯನ್ನು ಗಮನಿಸಿ: ಅವರ ಅರ್ಹತೆಯನ್ನು ಮುಂಚಿನ ತಾರೀಖಿನಿಂದ ಲೆಕ್ಕ ಹಿಡಿದು ಅನ್ವಯ ಗೊಳಿಸಲಾಗುತ್ತದೆ!) ಹಿನ್ನೋಟವನ್ನು ಸಮರ್ಥಿಸುವ ಕೆಲವು ಮಾತುಗಳು ಇಲ್ಲಿವೆ:

ನನ್ನದು ಚಂಚಲ ಮನಸ್ಸು ಎಂದು ಗೊತ್ತಿದ್ದೂ ನನ್ನನ್ನೇಕೆ ನಂಬಿದೆ?

ನನ್ನದು ತಪ್ಪು ಎಂದು ಗೊತ್ತಿದ್ದೂ ಅರ್ಥಮಾಡಿಕೊಳ್ಳದೆ ಇರುವುದಕ್ಕೆ ನೀನೇ ಹೊಣೆ!

ನಾನು ಹೀಗೆ ಅಂತ ಗೊತ್ತಿದ್ದರೂ ಅದನ್ನು ಅಲಕ್ಷ್ಯ ಮಾಡಿದೆಯಲ್ಲ, ಅದಕ್ಕೇ ನಿನ್ನ ದೆಸೆಯಿಂದ ನಾನು ಹಾಳಾಗುತ್ತಿದ್ದೇನೆ.

ಪೂರ್ವಾನ್ವಯದ ಸಮರ್ಥನೆ ಎಷ್ಟರ ಮಟ್ಟಿಗೆ ಹೋಗುತ್ತದೆ, ಹಾಗೂ ಅದಕ್ಕೆ ಎಂಥೆಂಥ ಆಧಾರ ತೆಗೆದುಕೊಳ್ಳಲಾಗುತ್ತದೆ ಎನ್ನುವುದಕ್ಕೆ ದೃಷ್ಟಾಂತ ಇಲ್ಲಿದೆ:

ಮಧ್ಯವಯಸ್ಸಿನ ಮಹಿಳೆಯು ಮಗಳ ಸಮೇತ ನನ್ನನ್ನು ಭೇಟಿಯಾಗಿದ್ದಾಳೆ. ಸಮಸ್ಯೆ ಏನೆಂದರೆ ಇಬ್ಬರಿಗೂ ಮಗಳ ಗಂಡನ ಲೈಂಗಿಕ ಕಾರ್ಯಕ್ಷಮತೆಯ ಬಗೆಗೆ ಸಂದೇಹ ಬಂದಿದೆ. ವಿವರ ಹೀಗಿದೆ: ಇವರದು ಪ್ರೇಮವಿವಾಹ. ಮದುವೆಯಾಗಿ ಎರಡು ವಾರವಷ್ಟೇ ಕಳೆದಿದೆ. ಸಿಕ್ಕ ನಾಲ್ಕೈದು ಕಾಮಕೂಟದ ಸಂದರ್ಭದಲ್ಲಿ ಸಂಭೋಗದ ಯತ್ನ ನಡೆದಿದ್ದರೂ ಇನ್ನೂ ಪೂರ್ಣಪ್ರಮಾಣದ ಆಗಿಲ್ಲ. ಇದಕ್ಕೆ ಹೆಂಡತಿಯ ನೋವಿನ ಭಯವೂ ಕಾರಣ. ಸಾಕಾಗದ್ದಕ್ಕೆ ಸಂಭೋಗ ಹೇಗೆ ಮಾಡಬೇಕೆಂದು ಇಬ್ಬರಿಗೂ ಗೊತ್ತಿಲ್ಲ. ಇಷ್ಟಿದ್ದರೂ ಈ ಸಂದೇಹ ಯಾಕೆ? ತಾಯಿ- ಮಗಳು ಇಬ್ಬರಿಗೂ ಜ್ಯೋತಿಷದಲ್ಲಿ ನಂಬಿಕೆ. ಅಳಿಯನಾಗುವವನಿಗೆ ಲೈಂಗಿಕ ಸಮಸ್ಯೆ ಬಂದೀತು ಎಂದು ಜ್ಯೋತಿಷಿ ಮುಂಚೆಯೇ ಎಚ್ಚರಿಸಿದ್ದಾರಂತೆ. ಹಾಗಾಗಿ ಅತ್ತೆಯು ಅಳಿಯನಾಗುವವನ ಪುರುಷತ್ವ ಖಚಿತತೆಗೆ ಮದುವೆಗೂ ಮುನ್ನ ಪರೀಕ್ಷೆಗೊಳಪಡಿಸಿದ್ದಾಳೆ. ಹೀಗಿದ್ದರೂ ಸಂದೇಹ ತಾಯಿ- ಮಗಳನ್ನು ತೊಲಗಿಲ್ಲ. ಅದಕ್ಕೇ ನನ್ನಬಳಿ ಬಂದಿದ್ದಾರೆ. ಮಾರನೆಯ ದಿನ ನಾನು ಗಂಡ ಹೆಂಡತಿ ಇಬ್ಬರನ್ನೂ ಮಾತಾಡಿಸಿದಾಗ ಗೊತ್ತಾಗಿದ್ದೇನು? ಗಂಡನಿಗೆ ಲೈಂಗಿಕ ಕಾರ್ಯಕ್ಷಮತೆಯಲ್ಲಿ ಏನೂ ದೋಷವಿಲ್ಲ. ಆದರೆ ದಂಪತಿ ಇನ್ನು ಎರಡು ವಾರ ಬಿಟ್ಟು ವಿದೇಶಕ್ಕೆ ಹಾರಲಿದ್ದಾರೆ. ಅದಕ್ಕಾಗಿ ಅವನು ಬಿಡುವಿಲ್ಲದೆ ಕೆಲಸ ಮಾಡುತ್ತಿದ್ದಾನೆ. ಹಾಸಿಗೆಗೆ ಹೋಗುವಾಗ ಹನ್ನೆರಡಾಗಿರುತ್ತದೆ. ಲೈಂಗಿಕ ಚಟುವಟಿಕೆಗೆ ತಕ್ಕ ಮನಸ್ಥಿತಿ ಬಂದಿಲ್ಲ. ಹಾಗಾಗಿ ಸಂಭೋಗವನ್ನು ವಿದೇಶ ಮುಟ್ಟುವ ತನಕ ಪಕ್ಕದಲ್ಲಿಟ್ಟಿದ್ದಾನೆ. ಇದನ್ನು ಹೆಂಡತಿ ಗಂಡನ ಅಸಾಮರ್ಥ್ಯವೆಂದು ನನ್ನೆದುರೇ ಬೆರಳುಮಾಡಿ ತೋರಿಸಿ, ವಿದೇಶದಲ್ಲಿಯೂ ಆಗದಿದ್ದರೆ ಎಂದು ಸಂದೇಹಿಸುತ್ತಾಳೆ. ಹೆಂಡತಿಯ ನೋವಿನ ಭಯವು ಗಂಡನ ಪ್ರಯತ್ನಕ್ಕೆ ಅಡ್ಡಿಯಾಗಬಹುದು ಎಂದು ನಾನೆಂದಾಗ, ತನ್ನ ನೋವನ್ನು ಅಲಕ್ಷಿಸಿ ಅವನು ಸಂಭೋಗ ನಡೆಸಬೇಕೆಂದು ಒತ್ತಿ ಹೇಳುತ್ತಾಳೆ. ಮಧುಚಂದ್ರಕ್ಕೆ ಹೋಗಲು ಸೂಚಿಸಿದಾಗ ಗಂಡ ಒಪ್ಪಿದರೂ ಹೆಂಡತಿಗೆ ಸಮಯವಿಲ್ಲ. ಯಾಕೆ? ಉಳಿದಿರುವ ಎರಡು ವಾರಗಳಲ್ಲಿ ಆಕೆ ಪತಿಯೊಂದಿಗೆ 20-22 ಶಾಂತಿಪೂಜೆ ಮಾಡಿಸಬೇಕಂತೆ- ಜ್ಯೋತಿಷಿ ಹೆಸರಿಸಿರುವ ದೋಷವನ್ನು ತೆಗೆದುಹಾಕುವುದಕ್ಕಾಗಿ! ಒಟ್ಟಾರೆ, ಏನೇ ಭರವಸೆಯ ಆಧಾರ ಕೊಟ್ಟರೂ ಪೂರ್ವಾನ್ವಯದ ಅರ್ಹತೆಯಿಂದ ಮುಕ್ತಿಯಿಲ್ಲ!

ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ **8494944888** ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.
ಲೇಖಕರ ವಿಳಾಸ: **www.medisex.org**